ವಿಪರ್ಯಾಸವೆಂದರೆ ಅಶೋಕವೃಕ್ಷದ ಉಪಯೋಗಗಳನ್ನು ತಿಳಿದುಕೊಂಡ ನಂತರ ಅನೇಕರು ಈ ವೃಕ್ಷವನ್ನು ಅರಣ್ಯಗಳಿಂದ ಮಿತಿಮೀರಿ ಕಡಿದು ಬರಿದು ಮಾಡಿರುತ್ತಾರೆ. ಇದರ ಪರಿಣಾಮವಾಗಿ ಅಶೋಕ ವೃಕ್ಷವು ಅಳಿವಿನಂಚಿಗೆ ಬಂದಿದ್ದು ಕೆಲವೇ ಕೆಲವು ಗಿಡಗಳು ಮಾತ್ರವಿದೆ. ಇಂತಹ ಗಿಡಗಳನ್ನು ಉಳಿಸಿ ಬೆಳೆಸಬೇಕಾದ ಅನಿವಾರ್ಯತೆಯಿದೆ. ನಮ್ಮ ತೋಟದಲ್ಲೂ ಒಂದು ಅಶೋಕ ಗಿಡ ನೆಟ್ಟಿದ್ದೇನೆ ಮತ್ತು ತೋಟ ನೋಡಲು ಬರುವ ಎಲ್ಲರಿಗೂ ಈ ಗಿಡವನ್ನು ತೋರಿಸಿ ಅದರ ಮಹತ್ವವನ್ನು ಹೇಳಿ ತಾವು ಒಂದೆರಡು ಗಿಡಗಳನ್ನು ನೆಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಉಜಿರೆಯ ಶ್ರೀಮತಿ ಪೂರ್ಣಿಮಾ ರವರು ಅಶೋಕ ಮರದ ಹೂವುಗಳನ್ನು ಬಳಸಿ ಚಟ್ನಿ ತಂಬುಳಿ ಗೊಜ್ಜು ಮಾಡಿರುವುದನ್ನು ನೋಡಿದ್ದೇನೆ.

ಗೋಪಾಲ್ಸ್ ತಂಡದ ವತಿಯಿಂದ ಬೆಂಗಳೂರಿನ ಕೆಲವು ಉದ್ಯಾನವನಗಳಲ್ಲಿ ಮತ್ತು ಅನೇಕ ಗೋಶಾಲೆಗಳಲ್ಲಿ ನೂರಕ್ಕೂ ಹೆಚ್ಚು ಅಶೋಕ ಗಿಡಗಳನ್ನು ಈಗಾಗಲೇ ನೆಟ್ಟಿರುತ್ತೇವೆ. ಇವಿಷ್ಟೇ ಅಲ್ಲದೆ ನಮ್ಮ ಪೂರ್ವಿಕರು ಪ್ರತಿಯೊಂದು ಗ್ರಹ, ರಾಶಿ ಮತ್ತು ನಕ್ಷತ್ರಕ್ಕೂ ಒಂದೊಂದು ವಿಶೇಷವಾದ ಗಿಡಗಳನ್ನು ಸೂಚಿಸಿರುತ್ತಾರೆ. ಇವುಗಳೆಲ್ಲವೂ ಪರಿಸರದಲ್ಲಿ ಸಮತೋಲನ ಕಾಪಾಡುವಂತಹ ಸಾಮರ್ಥ್ಯ ಹೊಂದಿರುವಂಥದ್ದು ಮತ್ತು ಔಷಧೀಯ ಗುಣಗಳ ಆಗರ ಆಗಿರುವಂತಹ ಸಸ್ಯಗಳು.

ಇನ್ನೇನು ಮಳೆಗಾಲ ಪ್ರಾರಂಭವಾಗಲಿದೆ. ವೃಕ್ಷಾಯುರ್ವೇದದ ಪ್ರಕಾರ ಯಾವ ಗಿಡಗಳನ್ನು ನೆಟ್ಟರೆ ಯಾವ ಪುಣ್ಯ ಲಭಿಸುತ್ತದೆ ಎಂಬುದನ್ನು ಈ ಹಿಂದಿನ ಲೇಖನದಲ್ಲಿ ವಿವರಿಸಿದ್ದೇನೆ. ಆಲದ ಜಾತಿಯ ಮರಗಳನ್ನು ಬೆಳೆಸುವುದರಿಂದ ಪ್ರಕೃತಿಯಲ್ಲಿ ಸಮತೋಲನ ಹೇಗೆ ಕಾಪಾಡಬಹುದು ಎಂದು ಅತ್ತಿ ಮರದ ಕುರಿತಾದ ಲೇಖನದಲ್ಲಿ ವಿವರಣೆ ನೀಡಲಾಗಿದೆ. ಇನ್ನು ತಡ ಮಾಡದೆ ಲಾಕ್ಡೌನ್ ಮುಗಿದನಂತರ ಇಂತಹ ಗಿಡಗಳನ್ನು ನಮ್ಮ ಸಮೀಪದ ದೇವಸ್ಥಾನ, ಉದ್ಯಾನವನಗಳಲ್ಲಿ, ಆಸ್ಪತ್ರೆ, ಶಾಲಾ-ಕಾಲೇಜು ಕಚೇರಿಗಳ ಆವರಣದಲ್ಲಿ ವಿಶೇಷವಾಗಿ ಮಹಿಳೆಯರು ಸಂಚರಿಸುವ ಜಾಗದಲ್ಲಿ ಅಶೋಕ ಮರದ ಸಸಿಗಳನ್ನು ನೆಡುತ್ತೀರೆಂದು ಆಶಿಸುತ್ತೇನೆ.